Indian Journal of History and Archaeology

ISSN (E):2582-225X
VOL-2, ISSUE -4,NOVEMBER-DECEMBER, 2020, 08-14

# ಚಾಮರಾಜನಗರ ಪರಿಸರದ ಕಮ್ಮಾರ ಕಲೆ

**ಡಾ.ಬಿ.ಎಸ್.ಜಗದೀಶ್**

**ಡಾ.ಬಿ.ಎಸ್.ಜಗದೀಶ್**
**ಚಾಮರಾಜನಗರ**

ಕಮ್ಮಾರಿಕೆಯವರು ಸಿದ್ಧವಾದ ಕಬ್ಬಿಣವನ್ನು ಬಳಸಿಕೊಂಡು ತಮ್ಮ ಕಲಾಕೌಶಲ್ಯದಿಂದ ವಿವಿಧ ಉಪಕರಣಗಳನ್ನು ತಯಾರಿಸುತ್ತಾರೆ. "ಕಮ್ಮಾರ ಎನ್ನುವುದು ಕರ್ಮಕಾರ ಎಂಬ ಶಬ್ದದತದ್ಭವ. ಕರ್ಮ + ಕಾರ = ಕಮ್ಮಾರ ಎಂದು ಈ ಶಬ್ದದ ನಿಷ್ಪತ್ತಿಯನ್ನು ಹೇಳಬಹುದು. ಕಮ್ಮಾರ, ಕಂಮಾರ, ಕರ್ಮಹರ, ಕಮ್ಮರ, ಕನ್ನಾರ, ಕಮ್ಬಾರ, ಕಂಬಾರ ಎಂಬ ಹೆಸರುಗಳು ಪ್ರಾಚೀನ ಹಾಗೂ ಅರ್ವಾಚೀನ ಕನ್ನಡ ಶಾಸನಗಳಲ್ಲಿ, ಕಾವ್ಯ, ವ್ಯಾಕರಣಗಳಲ್ಲಿ ಕಾಣಿಸಿಕೊಂಡಿವೆ. ಈ ವೃತ್ತಿಯ ಹೆಣ್ಣು ಮಕ್ಕಳಿಗೆ ಕಮ್ಮಾರಗಾತಿ, ಕಮ್ಮಾರಗಿತ್ತಿ, ಕಂಬಾರತಿ ಎಂಬ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ"[1] .ಇವರನ್ನು ಕುಲಮೆಯವರು,ಗೆಜ್ಜೆಗಾರ ಶೆಟ್ಟರು, ಕಬ್ಬಿಣದ ಕೆಲಸಗಾರರು ಎಂದು ಕರೆಯುತ್ತಾರೆ. ಇವರಿಗೆ ಗ್ರಾಮೀಣ ಪ್ರದೇಶದಲ್ಲಿ ತುಂಬಾ ಮಹತ್ತರವಾದ ಸ್ಥಾನವನ್ನು ನೀಡಿದ್ದಾರೆ. ಏಕೆಂದರೆ ಇವರು ಗ್ರಾಮೀಣ ಪ್ರದೇಶದ ಜನರಿಗೆ ಅಗತ್ಯವಿರುವಂತಹ ಕೃಷಿಗೆ ಸಂಬಂಧಿಸಿದ ಉಪಕರಣಗಳು ಹಾಗೂ ಕೆಲವು ಮನೆ ಬಳಕೆಯ ಉಪಕರಣಗಳನ್ನು ತಯಾರಿಸಿಕೊಡುತ್ತಾರೆ. ಇವರ ಕೆಲಸವು ತುಂಬಾ ಕಷ್ಟದಾಯಕವಾದ ಕೆಲಸವಾಗಿರುವುದರಿಂದ ಗಟ್ಟುಮುಟ್ಟಾದ ಮೈಕಟ್ಟು, ಆರೋಗ್ಯಕರ ದೇಹವನ್ನು ಹೊಂದಿರಬೇಕಾಗುತ್ತದೆ.

ಕಮ್ಮಾರರು ತಮ್ಮ ಆರಾಧ್ಯ ದೈವವಾದ ಸಿದ್ಧಪ್ಪಾಜಿಯವರ ಹೆಸರಿನಲ್ಲಿ ದೀಕ್ಷೆಯನ್ನು ಪಡೆದವರಾಗಿರುತ್ತಾರೆ. ಇವರುತಮ್ಮ 14ನೇ ವಯಸ್ಸಿನಲ್ಲಿ, ತಂದೆ,

[೧] ಡಾ.ಚಕ್ಕೆರೇ ಶಿವಶಂಕರ್(ಸಂ) 'ಜನಪದತಂತ್ರಜ್ಞಾನ' ಪುಟ ಸಂಖ್ಯೆ:೧೭೨

ತಾಯಿ ಮತ್ತು ಸಂಬಂಧಿಕರ ಸಮ್ಮುಖದಲ್ಲಿ ದೀಕ್ಷೆಯನ್ನು ಸೋಮವಾರ ಅಥವಾ ಶುಕ್ರವಾರದ ದಿನದಂದು ಮಾತ್ರ ಪಡೆಯುತ್ತಾರೆ.

ಇವರು ಉಪಕರಣಗಳನ್ನು ತಯಾರಿಸುವುದಕ್ಕೆ ಬಳಸುವ ಸಾಧನ ಸಲಕರಣೆಗಳು ಬ್ಲೋವರ್, ದೊಡ್ಡಸುತ್ತಿಗೆ, ಸಣ್ಣ ಸುತ್ತಿಗೆ, ಅರಣ, ಇಕ್ಕಳ, ಸಣ್ಣ ಮತ್ತುದೊಡ್ಡ ಚಾಣಗಳು, ಕಬ್ಬಿಣದಲ್ಲಿ ತೂತು ತೆಗೆಯಲು ಪೊಗರ, ಕಾದ ಇದ್ದಿಲನ್ನು ಸರಿಪಡಿಸಿಲು ಕಬ್ಬಿಣದ ಸರಳು, ಕಬ್ಬಿಣವನ್ನು ಕುಟ್ಟುವುದಕ್ಕೆ ಅಡಿಗಲ್ಲು ಮತ್ತುಒಂದು ನೀರು ತುಂಬಿದ ಕುಂಡ ಇವಿಷ್ಟು ಅವರ ಬಳಿ ಇಟ್ಟುಕೊಂಡಿರುತ್ತಾರೆ. ಇವರಿಗೆ ಬೇಕಾದಂತಹ ಸಲಕರಣೆಗಳನ್ನು ಬ್ಲೋವರ್ ಹೊರತು ಪಡಿಸಿ ಉಳಿದೆಲ್ಲವನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಹಿಂದೆ ಕುಲುಮೆಗೆ ಗಾಳಿ ಬರುವುದಕ್ಕಾಗಿ ಬ್ಲೋವರ್ ಬದಲು ಚರ್ಮದಿಂದ ಮಾಡಿದಂತಹ ತಿದಿಗಳನ್ನು ಬಳಕೆಯನ್ನು ಮಾಡುತ್ತಿದ್ದರಂತೆ. ಪ್ರಸ್ತುತದಲ್ಲಿ ಇದರ ಬಳಕೆಯು ತಾಲ್ಲೂಕಿನಲ್ಲಿ ಎಲ್ಲಿಯೂ ಸಹ ಕಾಣಸಿಗುವುದಿಲ್ಲ.

ಕಮ್ಮಾರರು ಈ ಮೇಲಿನ ಉಪಕರಣಗಳ ಸಹಾಯದಿಂದ ವ್ಯವಸಾಯಕ್ಕೆ ಮನೆಬಳಕೆಗೆ ಬೇಕಾದಂತಹ ಉಪಕರಣಗಳಾದ ಕುಡುಗೋಲು, ಮಚ್ಚು, ಕೊಡಲಿ, ಮಮ್ಟಿ, ಪಿಕಾಸಿ, ಹಾರೆ, ಗುದ್ದಲಿ, ಹಾಗೂ ಬಡಿಗಿಗೆ ಬೇಕಾದಂತಹ ಬಾಚಿ, ಉಳಿ, ಸುತ್ತಿಗೆ, ಬೈರಿಗೆ, ಅಕ್ಕಸಾಲಿಗನಿಗೆ ಬೇಕಾಗುವ ಇಕ್ಕಳ, ಸುತ್ತಿಗೆ, ಐರಾಸ, ಕಾನಸ್, ಚಿಮಟಗಳು, ಕ್ಷೌರಿಕನಿಗೆ ಬೇಕಾಗುವ ಕತ್ತಿ, ಕತ್ತರಿಗಳು ಮುಂತಾದ ಸಲಕರಣೆಗಳನ್ನು ತಯಾರಿಸುತ್ತಾರೆ.

**ಕುಡುಗೋಲು** :ಕುಡುಗೋಲು ಎಂಬುದನ್ನು ತಾಲ್ಲೂಕಿನಲ್ಲಿ 'ಕುಡುಗ್ಲು' ಎಂದುಕರೆಯುತ್ತಾರೆ. "ಗೊಲು ಎಂದರೆ ಕೋಲು ಎಂತಲೂ, 'ಕುಡ' ಎಂದರೆ ಕೊಯ್ಲು ಎಂತಲೂ ಅರ್ಥವಿದೆ. ಹಾಗಾಗಿ ಕೊಯ್ಯಲು ಬಳಸುವ ಕೋಲಿನ ಜೊತೆಗಿರುವ ಉಪಕರಣಕ್ಕೆ ಕುಡಗೋಲು ಎನ್ನುತ್ತಾರೆ. ಗ್ರಾಮ್ಯ ಭಾಷೆಯಲ್ಲಿ 'ಕುಡ್ಲು' ಎಂದಾಗಿದೆ"[2].ಕುಡುಗೋಲನ್ನು ಗಟ್ಟಿಯಾದ ಕಬ್ಬಿಣದ ಸಲಾಕೆಯಿಂದ ಮೇಲ್ಭಾಗದಲ್ಲಿ ಅರ್ಧಚಂದ್ರಕಾರದಲ್ಲಿ ಮಾಡಿ, ಹಿಡಿಯ ಭಾಗದಲ್ಲಿ ಮರದ ತುಂಡನ್ನು ಬಳಸಿ ಅದು ಬಿಗಿಯಾಗಿರಲೆಂದು ತಾಮ್ರದ ವೃತ್ತಾಕಾರದ ಬಳೆಯನ್ನು ಹಾಕಿರುತ್ತಾರೆ.ಇದನ್ನು ಸಾಮಾನ್ಯವಾಗಿ ಜಮೀನಿನಲ್ಲಿ ಕಳೆ ಕೀಳುವುದಕ್ಕೆ, ಕೊಯ್ಲುಕೊಯ್ಯಲು ಹೆಚ್ಚಾಗಿ ಬಳಸುತ್ತಾರೆ. ಮುಖ್ಯವಾಗಿ ಭತ್ತ, ರಾಗಿ, ಕಬ್ಬು, ಸಾಮೆ, ನವಣೆ, ದ್ವಿದಳ ಧಾನ್ಯಗಳು ಕೊಯ್ಯಲು ಮತ್ತು ಜಾನುವಾರುಗಳಿಗೆ ಜೋಳದ ಕಡ್ಡಿ, ಹುಲ್ಲು ಮುಂತಾದವುಗಳನ್ನು ಕೊಯ್ಯಲು ಬಳಸುತ್ತಾರೆ. ಹಾಗೆಯೇ ಮನೆಯ ಬಳಕೆಯ ಉಪಕರಣವಾಗಿ ಹಣ್ಣು, ತರಕಾರಿ, ಮಾಂಸ, ಸೊಪ್ಪುಇನ್ನಿತರ ವಸ್ತುಗಳನ್ನು ಕತ್ತರಿಸಲು ಈ ಉಪಕರಣವು ಹೆಚ್ಚು ಬಳಕೆಯಲ್ಲಿ ಇದೆ.

[೨]ಚಕ್ಕರೆ ಶಿವಶಂಕರ್ – ಬೇಸಾಯದ ಉಪಕರಣಗಳು, ಜನಪದತಂತ್ರಜ್ಞಾನ, ೨೦೦೩ ಪು.ಸಂಖ್ಯೆ ೫

**ಕಳ್ಕೊಟ್ಟು** : ಈ ವ್ಯವಸಾಯ ಉಪಕರಣವು ಗುದ್ದಲಿಯಂತೆ ನೇರವಾಗಿದ್ದು, ಮುಂದೆ ಬಾಚಿಯಂತೆ ಬಾಗಿರುತ್ತದೆ. ಇದುಇಂಗ್ಲೀಷಿನ ಐ ಆಕಾರದಲ್ಲಿ ಇದ್ದುಇದರ ಅಲಗಿನ ಹಿಂದಿರುವ ವೃತ್ತಾಕಾರದ ರಂಧ್ರಕ್ಕೆ ನೇರವಾದ ಮರದ ತುಂಡನ್ನು ಅಳವಡಿಸಲಾಗಿರುತ್ತದೆ.ಈ ಮರದತುಂಡು ಸುಮಾರುಎರಡರಿಂದಎರಡುವರೆ ಅಡಿಗಳಷ್ಟು ಉದ್ದವಿರುತ್ತದೆ.ರೈತನು ತನ್ನ ಅನುಕೂಲಕ್ಕೆ ತಕ್ಕಂತೆ ಹಿಡಿಯ ಉದ್ದವನ್ನು ನಿರ್ಧರಿಸುತ್ತಾನೆ. ಇದರ ಅಲಗು ನಾಲ್ಕರಿಂದ ಆರು ಇಂಚು ಉದ್ದ ಇದ್ದು ಮುಂಭಾಗದಲ್ಲಿ ಹರಿತವಾಗಿರುತ್ತದೆ. ಈ ಉಪಕರಣದಲ್ಲಿ ಚಿಕ್ಕ ಕಳ್ಕೊಟ್ಟು ಹಾಗೂ ದೊಡ್ಡ ಕಳ್ಕೊಟ್ಟು ಎಂಬ ಎರಡು ರೀತಿಯ ಉಪಕರಣವನ್ನು ಕಾಣಬಹುದು. ಚಿಕ್ಕ ಕಳ್ಕೊಟ್ಟನ್ನು ಹೊಲ ಮತ್ತು ಗದ್ದೆಗಳಲ್ಲಿ ಭತ್ತ ಮತ್ತು ರಾಗಿಯ ಕಳೆಯನ್ನು ಕೀಳಲು ಬಳಸಿದರೆ, ದೊಡ್ಡ ಕಳ್ಕೊಟ್ಟನ್ನು ಮಣ್ಣನ್ನು ಅಗೆಯಲು, ಗುಂಡಿ ತೆಗೆಯಲು, ಗಿಡಗಳನ್ನು ಗೆಡ್ಡಮಟ್ಟಕ್ಕೆ ಕಡಿಯಲು ಬಳಸುತ್ತಾರೆ. ಆಧುನಿಕತೆಯ ಸಂದರ್ಭದಲ್ಲಿ ಇದರ ಬಳಕೆ ಕಡಿಮೆಯಾಗಿದೆ.

**ಮಮ್ಟಿ** : ಈ ಉಪಕರಣದ ಅಲಗು ಆಯತಾಕಾರದಲ್ಲಿ ಇದ್ದು ತುದಿಯು ತೆಳುವಾಗಿ ಹರಿತವಾಗಿರುತ್ತದೆ. ಇದರ ಕಾಮಿಗೆ ಸಾಮಾನ್ಯವಾಗಿ ಗೊಬ್ಬಳ ಮರದ ಕಾಮನ್ನು(ಹಿಡಿ) ಹೆಚ್ಚಾಗಿ ಬಳಸುತ್ತಾರೆ. ಇದನ್ನು ಮಮ್ಟಿಯ ಹಿಂಭಾಗಕ್ಕೆ ಜೋಡಿಸಿರುತ್ತಾರೆ. ಇದರ ಕಾಮನ್ನು ನಯವಾಗಿ ಸವರಿ ಸಿವಿರುಗಳು ಇರದಂತೆ ರೈತನಿಗೆ ಹಿಡಿದುಕೊಳ್ಳಲು ಅನುಕೂಲವಾಗುವಂತೆ ತಯಾರಿಸಲಾಗಿರುತ್ತದೆ.ಈ ಉಪಕರಣವನ್ನು ಹೊಲ ಗದ್ದೆಗಳಲ್ಲಿ ಮಣ್ಣನ್ನು ಅಗೆಯಲು, ಸಮತಟ್ಟು ಮಾಡಲು, ತೆವರಿಕೊಚ್ಚಲು, ಗೊಬ್ಬರ ಹರಡಲು, ನೀರು ಹಾಯಿಸಲು, ಕಣವನ್ನು ಸೊಸಲು, ಗುಂಡಿಯಿಂದ ಮಣ್ಣನ್ನು ತೆಗೆಯಲು, ಕಟ್ಟಡ ನಿರ್ಮಾಣ ಕಾರ್ಯಗಳಲ್ಲಿ ಮರಳು, ಗಾರೆ, ಜಲ್ಲಿಕಲ್ಲನ್ನು ತುಂಬಲು ಇದನ್ನು ಬಳಸುತ್ತಾರೆ.

**ಪಿಕಾಸಿ** :ಇದು ಕಳ್ಕೊಟ್ಟಿನಂತೆಯೆ ಕಂಡು ಬಂದರು ಎರಡುಕಡೆ ಮುಖಗಳು ಇರುತ್ತವೆ. ಒಂದುಕಡೆ ಕಳ್ಕೊಟ್ಟಿನಂತೆ ಚಪ್ಪಟೆಯಾಗಿ ಅಲಗಿನ ತುದಿಯು ಹರಿತವಾಗಿರುತ್ತದೆ. ಮತ್ತೊಂದು ಮುಖವು ಬಾಚಿಯಂತೆ ಚೂಪಾಗಿರುತ್ತದೆ. ಇವೆರಡರ ನಡುವೆ ವೃತ್ತಾಕಾರದ ರಂಧ್ರವಿದ್ದು ಗೊಬ್ಬಳ ಮರದ ಹಿಡಿಯನ್ನು ಅಳವಡಿಸಲಾಗಿರುತ್ತದೆ.ಈ ಉಪಕರಣವು ದ್ವಿಪಾತ್ರವನ್ನು ನಿರ್ವಹಿಸುತ್ತದೆ. ಚಪ್ಪಟೆಯಾಕಾರದ ಭಾಗವು ಭೂಮಿಯೊಳಗೆ ಹುದುಗಿದ ಬೇರುತೆಗೆಯಲು, ನೆಲವನ್ನುಅಗೆಯಲು, ಗದ್ದೆ, ಹೊಲಗಳಲ್ಲಿ ಪಾತೆಯ ಮೂಲೆಗಳನ್ನು ಅಗೆಯಲು ಬಳಕೆಯಾಗುತ್ತದೆ.ಚೂಪಾದ ಭಾಗವು ಗುಳಿ ತೋಡಲು, ಹಳೆಯ ಮಣ್ಣಿನಗೋಡೆಗಳನ್ನು ಕೆಡವಲು ಬಳಕೆಯಾಗುತ್ತದೆ.

**ಹಾರೆ** : ಹಾರೆಯು ಸಾಮಾನ್ಯವಾಗಿ ಎಲ್ಲಾ ರೈತರ ಮನೆಗಳಲ್ಲಿ ಕಾಣಸಿಗುತ್ತದೆ. ವ್ಯವಸಾಯದ ಪ್ರತಿಯೊಂದು ಕೆಲಸದಲ್ಲಿ ಇದರ ಬಳಕೆ ಹೆಚ್ಚಾಗಿರುತ್ತದೆ. ಹಾರೆಯನ್ನು ಗಡುಸಾದ ಕಬ್ಬಿಣದಿಂದ ತಯಾರಿಸಲಾಗುತ್ತದೆ. ರೈತರು ತಾವು ಮಾಡುವ ಕೆಲಸಕ್ಕೆ ಅನುಗುಣವಾಗಿ ಇದರ ದಪ್ಪ, ಉದ್ದವನ್ನು

ನಿರ್ಧರಿಸಲಾಗುತ್ತದೆ. ಹಾರೆಯು ನೇರವಾದ ಸಲಾಕೆಯಂತೆ ಇದ್ದು ಮೇಲ್ಭಾಗ ಚಪ್ಪಟೆಯಾಗಿದ್ದು, ಕೆಳಭಾಗವು ಮೊನಚಾಗಿರುತ್ತದೆ. ಹಿಡಿದುಕೊಳ್ಳಲು ಅನುಕೂಲವಾಗುವಂತೆ ಚಪ್ಪಟೆಯಾಗಿ ಮಾಡಲಾಗಿರುತ್ತದೆ. ಇದರಲ್ಲಿ ಮೂರರಿಂದ ಆರು ಅಡಿಗಳವರೆಗೆ ಇರುವುದನ್ನು ಕಾಣಬಹುದು.ಇದನ್ನು ಹೆಚ್ಚಾಗಿ ಸಸಿಗಳನ್ನು ನೆಡಲು ಗುಳಿ ತೆಗೆಯಲು, ಮಣ್ಣನ್ನು ಸಡಿಲಗೊಳಿಸಲು, ಮಣ್ಣಿನಗೋಡೆಯನ್ನು ಕೆಡುವಲು, ಕಲ್ಲಿನಚಪ್ಪಡಿ, ದಿಮ್ಮಿಗಳನ್ನು ಸ್ಥಳಾಂತರಿಸಲು, ಗುಡ್ಡಗಳನ್ನು ಕಡಿಯಲು, ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಬಳಕೆಮಾಡುತ್ತಾರೆ. ಹಾಗೆಯೇ ಭಾರವಾದ ವಸ್ತುಗಳನ್ನು ಮೇಲೆರಿಸಲು ಸುಮಾರು ಆರರಿಂದ ಏಳುಅಡಿಗಳಷ್ಟು ಉದ್ದವಿರುವಂತಹ ಹಾರೆಕೋಲುಗಳನ್ನು ಬಳಸಲಾಗುತ್ತದೆ. ಗಿಡಗಳನ್ನು ನೆಡಲು ಗುಂಡಿಗಳನ್ನು ತೆಗೆಯಲು, ಸಾಂಬಾರು ಪದಾರ್ಥಗಳನ್ನು ವರಳಿನಲ್ಲಿ ಕುಟ್ಟಲುಇನ್ನಿತರ ಸಣ್ಣಪುಟ್ಟ ಮನೆಕೆಲಸಗಳಿಗೆ ಸುಮಾರು ಮೂರು ಅಡಿ ಉದ್ದವಿರುವ, ಒಂದುವರೆ ಇಂಚು ದಪ್ಪವಿರುವ ಹಾರೆಕೋಲನ್ನು ಬಳಸುತ್ತಾರೆ. ತಾಲ್ಲೂಕಿನ ಕೆಲವು ಭಾಗಗಳಲ್ಲಿ ಇದನ್ನು ಸರಳು ಎಂದು ಕರೆಯುವುದುಂಟು. ಹಾರೆಕೋಲು ಕೈಯಿಂದ ಜಾರದಿರಲೆಂದು ಹಿಡಿದುಕೊಳ್ಳುವ ಭಾಗದ ಸುತ್ತಲು ಗೆರೆಗಳನ್ನು, ಚಿತ್ರಗಳನ್ನು ಬಿಡಿಸಿರುತ್ತಾರೆ. ಆಧುನಿಕವಾಗಿ ಇಂದು ರಬ್ಬರ್ ಹಿಡಿಯನ್ನು ಅಥವಾ ಪ್ಲಾಸ್ಟಿಕ್ ಹಿಡಿಯನ್ನು ಹಾಕಿಕೊಳ್ಳುತ್ತಾರೆ.

**ಮಚ್ಚು** :ಗ್ರಾಮೀಣ ಭಾಗದಲ್ಲಿ ಹೆಚ್ಚು ಬಳಕೆಯಲ್ಲಿ ಇರುವ ಉಪಕರಣಗಳಲ್ಲಿ ಮಚ್ಚು ಒಂದು. ಇದು ಕುಡಗೋಲಿನಂತೆ ಅರ್ಧಚಂದ್ರಾಕಾರದಲ್ಲಿ ಇದ್ದು, ಕೆಳಭಾಗದಲ್ಲಿ ಮರದ ಹಿಡಿಯನ್ನು ಹಾಗೂ ಕಬ್ಬಿಣದ ಹಿಡಿಯನ್ನು ಹೊಂದಿರುತ್ತದೆ.ಇದು ಕುಡುಗೋಲಿಗಿಂತ ಭಾರವಾಗಿ ಮತ್ತು ಗಟ್ಟಿಯಾಗಿ ಇದ್ದು ಗಾತ್ರದಲ್ಲಿ ಸ್ವಲ್ಪ ದೊಡ್ಡದಾಗಿರುತ್ತದೆ. ಇದರ ಅಲಗು ಕುಡುಗೋಲಿನಷ್ಟು ಬಾಗಿರುವುದಿಲ್ಲ ಮತ್ತು ಮುಂಭಾಗ ಹರಿತವಾಗಿರುತ್ತದೆ. ಇದನ್ನು ಹೆಚ್ಚಾಗಿ ಕಾಡಿನಲ್ಲಿ ಸೌದೆಗಳನ್ನು ಕಡಿಯಲು ಬಳಸಲಾಗುತ್ತಿತ್ತು. ಚಾಮರಾಜನಗರ ತಾಲ್ಲೂಕು ಅರಣ್ಯಪ್ರದೇಶದಿಂದ ಕೂಡಿರುವುದರಿಂದ ಇದರ ಬಳಕೆಯು ಇಲ್ಲಿ ಹೆಚ್ಚಾಗಿದೆ. ಪ್ರಸ್ತುತದಲ್ಲಿ ಮಚ್ಚನ್ನುತೆಂಗಿನ ಬೆಳೆಗಾರರು ಹೆಚ್ಚಾಗಿ ಬಳಸುತ್ತಾರೆ.ಎಳನೀರು ಕೊಚ್ಚಲು, ತೆಂಗಿನಕಾಯಿ ಸುಲಿಯಲು, ತೆಂಗಿನ ಮಟ್ಟೆಕಡಿಯಲು ಬಳಸುತ್ತಾರೆ. ವ್ಯವಸಾಯದ ಉಪಕರಣಗಳಿಗೆ ಕಾಮು ಅಥವಾ ಹಿಡಿಗಳನ್ನು ಕತ್ತರಿಸಲು, ನಯಗೊಳಿಸಲು ಮಚ್ಚನ್ನು ಬಳಸುತ್ತಾರೆ.

**ಕೊಡಲಿ**: ಇದನ್ನು ಉಪಕರಣಗಳಲ್ಲೇ ಅತಿ ಪುರಾತನ ಸಾಧನ ಎಂದು ಹೇಳಬಹುದು. ಶಿಲಾಯುಗದಿಂದಲ್ಲಿ ಬೇಟೆಗಾಗಿ, ಕಲ್ಲಿನ ಕೊಡಲಿಯನ್ನು ಬಳಸುತ್ತಿದ್ದ ಆಧಾರಗಳನ್ನು ಕಾಣಬಹುದು.ಕೊಡಲಿಯು ಆಯಾತಕಾರದಲ್ಲಿ ಮುಂಭಾಗವು ಹರಿತವಾಗಿದ್ದು, ಹಿಂಭಾಗದಲ್ಲಿ ವೃತ್ತಾಕಾರದ ಬಳೆಯನ್ನು ಹೊಂದಿದ್ದು ಅದಕ್ಕೆ ಮರದಕಾಮನ್ನು(ಹಿಡಿ)ಯನ್ನು ಅಳವಡಿಸಲಾಗಿರುತ್ತದೆ. ಈ ಕೊಡಲಿಗಳನ್ನು ತಾಲ್ಲೂಕಿನಲ್ಲಿ ಕೊಳ್ಳಿ, ಕೊಡ್ಲಿ, ಕೊಡಲಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.ಈ ಕೊಡಲಿಗಳಲ್ಲಿ ಪ್ಲೇಟುಕೊಡಲಿ, ಪಿಚ್ಚಕೊಳ್ಳಿ,

ಕೈಕೊಳ್ಳ ಎಂಬ ಬಗೆಗಳನ್ನು ಕಾಣಬಹುದು. ಕೊಡಲಿಯನ್ನು ಸೌದೆ ಸೀಳಲು, ಮರಕಡಿಯಲು ಬಳಸುತ್ತಾರೆ. ಪ್ಲೇಟ್ ಕೊಳ್ಳಯನ್ನು ಮರವನ್ನು ತುಂಡುಗಳನ್ನಾಗಿ ಮಾಡಲು ಬಳಸುತ್ತಾರೆ. ಪಿಚ್ಚಕೊಳ್ಳಯನ್ನು ಮನೆಯಲ್ಲಿನ ಸಣ್ಣಪುಟ್ಟ ಕಡ್ಡಿಗಳನ್ನು ತುಂಡರಿಸಲುಉಪಯೋಗಿಸುತ್ತಾರೆ.ಕುಡುಗೋಲು ಮತ್ತು ಮಚ್ಚುಗಳಿಂದ ಮಾಡಲಾಗದ ಕೆಲಸಗಳನ್ನು ಕೊಡಲಿಗಳಿಂದ ಮಾಡಲಾಗುತ್ತದೆ.ಕೈಗೊಳ್ಳಗಳು ಮನೆ ಬಳಕೆಗೆ ಉಪಯೋಗಿಸಿದರೆ, ದೊಡ್ಡ ಕೊಡಲಿಗಳನ್ನು ಹೊಲ ಗದ್ದೆ, ಕಾಡುಗಳಲ್ಲಿ ಒರಟಾದ ಕೆಲಸಗಳಿಗೆ ಬಳಸಲಾಗುತ್ತದೆ.

ಕಮ್ಮಾರಿಕೆ ಕೆಲಸವನ್ನು ಮಾಡುವುದಕ್ಕೆ ಸುಮಾರು ಮೂರುರಿಂದ ನಾಲ್ಕು ಜನರಾದರು ಬೇಕಾಗುತ್ತದೆ. ಒಬ್ಬರು ಬ್ಲೋವರ್ ತಿರುಗಿಸಿದರೆ, ಮತ್ತೊಬ್ಬರು ಕಾದ ಕಬ್ಬಿಣವನ್ನುಅಡಗಲ್ಲಿನ ಮೇಲೆ ಇಟ್ಟು ಸಣ್ಣ ಸುತ್ತಿಗೆಯಿಂದ ಸಣ್ಣಪೆಟ್ಟುಕೊಟ್ಟರೆ, ಒಬ್ಬರಿಂದ ಇಬ್ಬರು ದೊಡ್ಡ ಸುತ್ತಿಗೆಯಿಂದ ದೊಡ್ಡ ಪೆಟ್ಟು ನೀಡುತ್ತಾರೆ. ಸಾಮಾನ್ಯವಾಗಿ ಬ್ಲೋವರ್ ತಿರುಗಿಸುವುಕ್ಕೆ ಮತ್ತು ದೊಡ್ಡ ಪೆಟ್ಟು ನೀಡುವುದಕ್ಕೆ, ಉಪಕರಣಗಳನ್ನು ಮಾಡಿಸಲು ಬರುವ ರೈತರೆ ಮಾಡುವುದು ಉಂಟು.

ಕಮ್ಮಾರಿಕೆಯವರು ದೊಡ್ಡ ಉಪಕರಣಗಳನ್ನು ಮಾಡುವಾಗ ಕಬ್ಬಿಣಕ್ಕೆ ದೊಡ್ಡ ಪೆಟ್ಟುಗಳು ಬೇಕಾದಾಗ ಮತ್ತೊಬ್ಬರ ಸಹಾಯವನ್ನು ಪಡೆಯುತ್ತಾರೆ. ಆ ವ್ಯಕ್ತಿಯುದೊಡ್ಡ ಸುತ್ತಿಗೆಯಿಂದ ಪೆಟ್ಟುನೀಡುವಾಗ ಕಮ್ಮಾರಿಕೆಯವನ್ನು ಹೊಡೆತ ಬಿಳಬೇಕಾದ ಜಾಗವನ್ನು ಅಡಗಲ್ಲಿನ ಮೇಲೆ ಇಟ್ಟು ನಿರ್ದೇಶಿಸುತ್ತಾನೆ. ಸಣ್ಣ ಪೆಟ್ಟುಗಳು ಬೇಕಾದಾಗ ಕಾದ ಕಬ್ಬಿಣವನ್ನು ಇಕ್ಕಳದ ಸಹಾಯದಿಂದ ಹಿಡಿದು ಅದನ್ನುಅಡಗಲ್ಲ ಮೇಲೆ ಇಟ್ಟು ತಮ್ಮ ಕೈಯಲ್ಲಿ ಇರುವಂತಹ ಸಣ್ಣ ಸುತ್ತಿಯಿಂದ ಹೊಡೆದು ಉದ್ದೇಶಿತ ಆಕಾರತರುತ್ತಾರೆ. ಇದನ್ನು ಮಾಡುವುದಕ್ಕೆ ವಿಶಿಷ್ಟವಾದ ಕೌಶಲ್ಯವು ಅವಶ್ಯಕ.ಸಾಮಾನ್ಯ ವ್ಯಕ್ತಿಯು ಈ ರೀತಿ ಹೊಡೆದು ಕಬ್ಬಿಣಕ್ಕೆ ಆಕಾರ ನೀಡುವುದಕ್ಕೆ ಕಷ್ಟಸಾಧ್ಯವಾದುದು.ಪಾರಂಪರಿಕವಾಗಿ ಬಂದಂತಹ ಈ ಕಲೆಯುತನ್ನದೇ ಆದಂತಹ ಕೆಲವು ರಹಸ್ಯವನ್ನು ಉಳಿಸಿಕೊಂಡು ಬಂದಿದೆ.ಕಬ್ಬಿಣವನ್ನು ಸರಿಯಾದ ಪ್ರಮಾಣದಲಿ ಕಾಯಿಸುವಲ್ಲಿ, ಅದಕ್ಕೆ ಉದ್ದೇಶಿತ ಆಕಾರ ಬರುವವರೆಗೆಪೆಟ್ಟು ನೀಡುವಲ್ಲಿ, ಅರೆಯಿಂದ ಉಪಕರಣಗಳನ್ನು ಉಜ್ಜಿ ಹರಿತಗೊಳಿಸುವುದರಲ್ಲಿ, ಕಾದ ಕಬ್ಬಿಣವನ್ನು ಉದ್ದೇಶಿತ ಆಕಾರವಾದ ಮೇಲೆ ಅದನ್ನು ನೀರಿನಲ್ಲಿ ಹಾಕಿ ಗಟ್ಟಿಗೊಳಿಸುವಾಗ, ಹೆಚ್ಚಾಗಿ ನೀರುಣಿಸಿದರೆ ಬಿರುಸುಗೊಂಡು, ಕಡಿಮೆ ನೀರುಣಿಸಿದರೆ ಮೃದುಗೊಂಡು ಬಳಕೆಯ ಸಂದರ್ಭದಲ್ಲಿ ಮುರಿದು ಹೋಗುತ್ತದೆ. ಅದಕ್ಕಾಗಿ ಇವರುಕಾದ ಕಬ್ಬಿಣವನ್ನು ಬಡಿದುಆಕಾರ ಹೊಂದಿದ ನಂತರ ನೀಲವರ್ಣಕ್ಕೆತಿರುಗಿದಾಗ ಮಾತ್ರಇಂತಿಷ್ಟು ಪ್ರಮಾಣದಲ್ಲಿ ನೀರುಣಿಸುತ್ತಾರೆ. ಹೆಚ್ಚು ನೀರುಂಡು ಬಿಳಿಯ ಬಣ್ಣಕ್ಕೆ ತಿರುಗಿದರೆ ಅಥವಾ ಕಬ್ಬಿಣವು ಉದ್ದೇಶಿತ ಆಕಾರಕ್ಕೆ ಬರುವ ಮೊದಲೆ ಆರಿದರೆ ಅದನ್ನು ಮತ್ತೆ ಕಾಯಿಸಬೇಕಾಗುತ್ತದೆ. ಹೀಗೆ ಈ ವೃತ್ತಿಯಲ್ಲಿ ವಿಶೇಷ ರಹಸ್ಯವಡಗಿದೆ. ಇದು

ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿರುವಂತಹದ್ದಾಗಿದ್ದು, ಕಮ್ಮಾರರು ತಾನು ಮಾಡಿದ ಉಪಕರಣಗಳನ್ನು ಮತ್ತು ಬೇರೆಯವರು ಮಾಡಿದ ಉಪಕರಣಗಳನ್ನು ಬಹಳ ಸುಲಭವಾಗಿ ಪತ್ತೆ ಹಚ್ಚುವ ಸಾಮರ್ಥ್ಯವನ್ನು ಹೊಂದಿದ್ದಾನೆ.

ಕಮ್ಮಾರರು ರೈತರಿಗೆ ವ್ಯವಸಾಯದ ಸಂದರ್ಭದಲ್ಲಿ ಅಗತ್ಯವಾದಂತಹ ಎಲ್ಲಾ ಬಗೆಯ ಉಪಕರಣಗಳನ್ನು ಮಾಡಿಕೊಡುತ್ತಾರೆ.ಸುಗ್ಗಿ ಕಾಲದ ಸಂದರ್ಭದಲ್ಲಿ ರೈತರು ತಾವು ಬೆಳೆದಂತಹ ಬೆಳೆಯಲ್ಲಿ ಒಂದು ಪಾಲನ್ನು ಕಮ್ಮಾರರಿಗೆ ಪ್ರತಿಫಲವಾಗಿ ನೀಡುತ್ತಿದ್ದರು. ವ್ಯವಸಾಯ ಮಾಡುವುದಕ್ಕೆ ಕಮ್ಮಾರ ಸಹಕಾರವು ಅತ್ಯಮೂಲ್ಯವಾದುದರಿಂದ ಇವರನ್ನು ತೃಪ್ತಿಪಡಿಸಬೇಕಾದದ್ದು ಇವರ ಕರ್ತವ್ಯವಾಗಿತ್ತು.ಆ ವರ್ಷದಲ್ಲಿ ಮಳೆ ಚೆನ್ನಾಗಿ ಆಗಿ ಭೂಮಿ ಚೆನ್ನಾಗಿ ಬೆಳೆದರೆ ಒಂದಕ್ಕೆ ಎರಡರಷ್ಟು ಪಾಲನ್ನು ನೀಡುತ್ತಾರೆ. ಮಳೆಯಾಗದೆ ಭೂಮಿಯಲ್ಲಿ ಚೆನ್ನಾಗಿ ಬೆಳೆಯದಿದ್ದರೆ ರೈತರು ನೀಡಿದಷ್ಟು ಮಾತ್ರ ಪಡೆದುಕಮ್ಮಾರನು ತೃಪ್ತಿಪಡಬೇಕಾಗುತ್ತದೆ. ಬೆಳೆಯನ್ನು ಕುಯ್ಯುವಾಗಕಮ್ಮಾರನು ಹೋದರೆತಾನು ಹೊರುವಷ್ಟು ತೆನೆದಂಟಿನ ಹೊರೆಯನ್ನುತರಬಹುದು.ಆದರೆಇನ್ನುಆತನೆ ಹೊಲವನ್ನದಾಟುವವರೆಗೆ ಹೊತ್ತುಕೊಂಡು ಹೋಗಿ ಆ ನಂತರದಲ್ಲಿ ಗಾಡಿಯಲ್ಲೊ ಅಥವಾ ಮತ್ತೊಬ್ಬರ ಬಳಯಲ್ಲೊ ಹೊರಿಸಿಕೊಡು ತರಬಹುದಿತ್ತು. ಕಬ್ಬಿನಗಾಣ ನಡೆದಾಗಕಬ್ಬಿನ ಹಾಲು, ಬೆಲ್ಲ ಮುಂತಾದವುಗಳನ್ನು ಆತತರಬಹುದಾಗಿತ್ತು. ಪ್ರಸ್ತುತದಲ್ಲಿ ಕಾಲ ಕಾಲಕ್ಕೆ ಮಳೆ ಬೆಳೆಯು ಸರಿಯಾಗಿ ಆಗದ ಕಾರಣ ರೈತರುತಮಗೆ ಬೇಕಾದಂತಹ ಉಪಕರಣಗಳನ್ನು ಮಾಡಿಸಿಕೊಂಡು ಅದಕ್ಕೆ ನಿಗಧಿ ಮಾಡಿದ ಹಣವನ್ನು ನೀಡಿ ಹೋಗುತ್ತಾರೆ.ಉಪಕರಣಗಳನ್ನು ತಿಕ್ಕಿ ಹರಿತಗೊಳಸುವುದಕ್ಕೆ 10 ರಿಂದ30 ರೂಪಾಯಿ ನೀಡಿದರೆ, ಹೊಸ ಉಪಕರಣಕ್ಕೆ ಗಾತ್ರದ ಅನುಗುಣವಾಗಿ ಕಮ್ಮಾರನು ನಿಗಧಿ ಪಡಿಸಿದ ಹಣವನ್ನು ನೀಡಿ ಪಡೆಯುತ್ತಾರೆ.

**ಕಮ್ಮಾರರ ಸ್ಥಿತಿಗತಿಗಳು**

1) ಈ ಕಸಬು ಮಾಡುವವರೆಲ್ಲರು ತಳ ಸಮುದಾಯದವರು
2) ಇವರ ವೃತ್ತಿಯಲ್ಲಿ ನೆಮ್ಮದಿ, ಆರ್ಥಿಕ ಭದ್ರತೆ, ಸಾಮಾಜಿಕ ಸ್ಥಾನಮಾನಗಳು ಇದೆಲ್ಲವೂ ದೊರತಿದ್ದರೆ ಖಂಡಿತವಾಗಿಯೂ ಅವರು ವೃತ್ತಿಯನ್ನು ತೊರೆದು ಬೇರೆ ವೃತ್ತಿಗಳಲ್ಲಿ ತೊಡಗಿಕೊಳ್ಳುತ್ತಿರಲಿಲ್ಲ.
3) ಮಾರಾಟ ಮಾಡಿ ಹಣಗಳಸುವುದರಲ್ಲೂ ಸಹ ದಿನಗಟ್ಟಲೆಕಾಯಬೇಕು.
4) ನಗರ ಪ್ರದೇಶದ ಸಮೀಪದಲ್ಲಿ ನೆಲೆಸಿರುವವರು ತಮ್ಮ ವೃತ್ತಿಯನ್ನು ಬಿಟ್ಟು, ಅಂಗಡಿ, ಮಾಲ್, ಹೋಟೆಲ್, ಎಲೆಕ್ಟ್ರಿಷಿಯನ್, ಡ್ರೈವರ್ ಕೆಲಸಕ್ಕೆ ಸೇರಿದ್ದಾರೆ
5) ಗ್ರಾಮೀಣ ಪ್ರದೇಶದಲ್ಲಿ ಇರುವವರು ತೋಟದ ಕಾರ್ಮಿಕರಾಗಿಯೂ, ಗಾರೆ ಕೆಲಸದಲ್ಲಿ ನಿರತರಾಗಿದ್ದಾರೆ.

6) ಕೆಲವರುತಮ್ಮ ಸ್ವಾಭಿಮಾನದಿಂದ ಪ್ರಸ್ತುತದಲ್ಲೂ ತಮ್ಮ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.
7) ಆದರೆಯಾರು ಸಹ ತಮ್ಮ ಮಕ್ಕಳಿಗೆ ಈ ವೃತ್ತಿಯನ್ನು ಬೆಳೆಸಿಕೊಂಡು ಹೋಗುವುದಕ್ಕೆ ಪ್ರೋತ್ಸಾಹಿಸುವುದಿಲ್ಲ.

ಪರಮಾರ್ಶನ ಗ್ರಂಥಗಳು:

1. **ಚಿಕ್ಕೆರೆ.ಶಿವಶಂಕರ್**(2003): **'ಜನಪದ ತಂತ್ರಜ್ಞಾನ'** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.